(12)
153ನೇ 6

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು**
**ನಿಯಮ-72ರ ಅಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ**

ಕೋಲಾರ ನಗರದಲ್ಲಿ 1948ರಲ್ಲಿ ಅಂದು ಮಹಾರಾಜರಾಗಿದ್ದ ಶ್ರೀ ಕೃಷ್ಣರಾಜ ಒಡೆಯರ್‌ರವರು ಇಲ್ಲಿನ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ, ಸರ್ಕಾರಿ ಬಾಲಕರ ಕಾಲೇಜನ್ನು ಪ್ರಾರಂಭಿಸಿರುತ್ತಾರೆ. ಆದರೆ ಈ ಕಾಲೇಜಿಗೆ ಪೀಠೋಪಕರಣ, ಉತ್ತಮವಾದ ಸ್ವಚ್ಛತೆಯುಳ್ಳ ಕೊಠಡಿಗಳು, ಉಪನ್ಯಾಸಕರ ಕೊರತೆ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳಿಲ್ಲದೆ, ಕಾಲೇಜು ತುಂಬಾ ಹೀನಾಯ ಪರಿಸ್ಥಿತಿಯನ್ನು ಹೊಂದಿದೆ. ಸುಮಾರು 75 ವರ್ಷ ಇತಿಹಾಸವುಳ್ಳ ಈ ಕಾಲೇಜಿಗೆ ಕನಿಷ್ಠ ಸೌಲಭ್ಯಗಳಿಲ್ಲದೆ, ಸುಣ್ಣಬಣ್ಣವಿಲ್ಲದೆ, ಕಾಂಪೌಂಡ್ ಇಲ್ಲದೆ, ಉಪನ್ಯಾಸಕರಿಲ್ಲದಿರುವುದರಿಂದ, ಸದರಿ ಕಾಲೇಜನ್ನು ಉನ್ನತೀಕರಿಸಿ ಮೇಲ್ದರ್ಜೆಗೇರಿಸಬೇಕಾಗಿದ್ದು, ಇದರಂತೆ ಬಾಲಕಿಯರ ಪ್ರಥಮ ದರ್ಜೆ ಕಾಲೇಜಿನಲ್ಲಿಯೂ ಸಹ ಸುಮಾರು 3000ಕ್ಕೂ ಅಧಿಕವಾಗಿ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇಲ್ಲಿಯೂ ಸಹ ಮೂಲಭೂತ ಸೌಲಭ್ಯದ ಕೊರತೆ ಇರುವ ಬಗ್ಗೆ.

**ಉತ್ತರ**

ಕೋಲಾರದ ಸರ್ಕಾರಿ ಬಾಲಕರ ಕಾಲೇಜನ್ನು 1948ರಲ್ಲಿ ಪ್ರಾರಂಭಿಸಲಾಗಿದ್ದು, ಬಿಎ, ಬಿಕಾಂ, ಬಿಎಸ್ಸಿ. ಬಿಸಿಎ & ಬಿಎಸ್‌ಡಬ್ಲ್ಯೂ ಹಾಗೂ ಎಂ.ಎ. ಸ್ನಾತಕೋತ್ತರ ಕೋರ್ಸುಗಳನ್ನೊಳಗೊಂಡಂತೆ 1560 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಸದರಿ ಕಾಲೇಜಿಗೆ ಈಗಾಗಲೇ ಸ್ವಂತ ಕಟ್ಟಡ ಇದ್ದು, ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಕೊಠಡಿಗಳನ್ನು ಹೊಂದಿರುತ್ತದೆ. ಇದಲ್ಲದೇ ಸದರಿ ಕಾಲೇಜಿಗೆ ಕೆಳಕಂಡಂತೆ ಮೂಲಭೂತ ಸೌಕರ್ಯಗಳಿಗಾಗಿ ಅನುದಾನ ಒದಗಿಸಲಾಗಿದೆ:

| ಕ್ರ.ಸಂ | ಮಂಜೂರಾದ ವರ್ಷ | ಕಾಮಗಾರಿಯ ಹೆಸರು | ಅಂದಾಜುಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | 2014-15 | ಸುಣ್ಣಬಣ್ಣ ಹಾಗೂ ವಿವಿಧ ದುರಸ್ಥಿ ಕಾರ್ಯಗಳು | 30.00 |
| 2. | 2015-16 | ತರಗತಿ ಕೊಠಡಿಗಳ ನಿರ್ಮಾಣ | 85.00 |
| 3. | 2018-19 | ತರಗತಿ ಕೊಠಡಿಗಳ ನಿರ್ಮಾಣ | 200.00 |
| 4. | 2018-19 | ಸುಣ್ಣಬಣ್ಣ ಹಾಗೂ ವಿವಿಧ ದುರಸ್ಥಿ ಕಾರ್ಯಗಳು | 20.50 |
| 5. | 2015-16 ರೂಸಾ 1.0 ಯೋಜನೆಯಡಿ | ಉನ್ನತೀಕರಣ/ನವೀಕರಣಕ್ಕಾಗಿ | 34.13 |
| | | ಹೆಚ್ಚುವರಿ ತರಗತಿ ಕೊಠಡಿ ನಿರ್ಮಾಣ | 70.00 |
| 6. | 2018-19 | ಪ್ರಯೋಗಾಲಯ | 70.00 |
| 7. | 2018-19 | ಮಹಿಳಾ ಶೌಚಾಲಯದೊಂದಿಗೆ ವಿಶ್ರಾಂತಿ ಕೊಠಡಿ ನಿರ್ಮಾಣ | 30.00 |
| 8. | 2021-22 | ವಿವಿಧ ಕಟ್ಟಡ ಮೂಲಸೌಕರ್ಯ | 167.00 |
| 9. | 2022-23 | ವಿವಿಧ ಕಟ್ಟಡ ಮೂಲಸೌಕರ್ಯ | 150.00 |
| 10. | 2023-24 | ವಿವಿಧ ಕಟ್ಟಡ ಮೂಲಸೌಕರ್ಯ | 500.00 |

ಕೋಲಾರದ ಸರ್ಕಾರಿ ಬಾಲಕರ ಕಾಲೇಜಿಗೆ ಸಂಪೂರ್ಣವಾದ ಕಾಂಪೌಂಡ್ ಸಹ ಇರುತ್ತದೆ. ಈ ಮಧ್ಯೆ ಕೋಲಾರ ನಗರದಲ್ಲಿ ಹಾದು ಹೋಗುತ್ತಿರುವ ಬಂಗಾರಪೇಟೆ – ಬಾಗೇಪಲ್ಲಿ ರಸ್ತೆ ರಾಜ್ಯ ಹೆದ್ದಾರಿ-5ರ ಭಾಗವಾದ ಸ್ಪಿಟಲ್ ವೃತ್ತದಿಂದ ಮೆಕ್ಕೆ ವೃತ್ತದವರೆಗೆ ನಾಲ್ಕು ಪಥಗಳ ರಸ್ತೆ ನಿರ್ಮಾಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿದ್ದು, ಅದರಂತೆ ಸದರಿ ಕಾಲೇಜಿಗೆ ಸಂಬಂಧಿಸಿದ

ಕಟ್ಟಡದ ಪೂರ್ವಭಾಗದ ಹಾಲಿ ಆವರಣ ಗೋಡೆಯನ್ನು ಲೋಕೋಪಯೋಗಿ ಇಲಾಖೆ ಉಪವಿಭಾಗ, ಕೋಲಾರರವರು ಕೆಡವಿ, 2 ಮೀಟರ್ ಹಿಂದಕ್ಕೆ ನಿರ್ಮಿಸಲು ಆದೇಶಿಸಿರುತ್ತಾರೆ. ಈ ಸಂಬಂಧದಲ್ಲಿ, ಸದರಿ ಆವರಣ ಗೋಡೆಯನ್ನು ಜಿಲ್ಲಾಡಳಿತದ ವತಿಯಿಂದ ಅನುದಾನವನ್ನು ಪಡೆಯಲು ಮುಂದಿನ ಕ್ರಮವಹಿಸುವಂತೆ ಸದರಿ ಕಾಲೇಜಿನ ಪ್ರಾಂಶುಪಾಲರಿಗೆ ಈಗಾಗಲೇ ನಿರ್ದೇಶಿಸಲಾಗಿದ್ದು, ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ.

ಕೋಲಾರದ ಸರ್ಕಾರಿ ಬಾಲಕರ ಕಾಲೇಜಿಗೆ ಮಂಜೂರಾಗಿರುವ, ಕರ್ತವ್ಯ ನಿರತ, ಖಾಲಿ ಹುದ್ದೆಗಳ ಹಾಗೂ ಅತಿಥಿ ಉಪನ್ಯಾಸಕರ ಮಾಹಿತಿಯನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಕಾಲೇಜಿನಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ/ಕೊರತೆ ಇರುವ ಉಪನ್ಯಾಸಕರ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಪಾಠ-ಪ್ರವಚನಗಳನ್ನು ನಡೆಸಲಾಗುತ್ತಿದೆ.

ಕೋಲಾರದ ಬಾಲಕಿಯರ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 1984 ರಲ್ಲಿ ಪ್ರಾರಂಭಿಸಲಾಗಿದ್ದು, ಬಿಎ, ಬಿಬಿಎಂ, ಬಿಕಾಂ & ಬಿಎಸ್ಸಿ., ಪದವಿ ಹಾಗೂ ಎಂ.ಎ & ಎಂ.ಕಾಂ ಸ್ನಾತಕೋತ್ತರ ಕೋರ್ಸುಗಳನ್ನೊಳಗೊಂಡಂತೆ ಒಟ್ಟು 3075 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಸದರಿ ಕಾಲೇಜಿಗೆ ಸ್ವಂತ ಕಟ್ಟಡ ಇದ್ದು ವಿದ್ಯಾರ್ಥಿನಿಯರ ಸಂಖ್ಯೆಗನುಗುಣವಾಗಿ ಕೊಠಡಿಗಳನ್ನು ಹೊಂದಿರುತ್ತದೆ. ಇದಲ್ಲದೇ ಸದರಿ ಕಾಲೇಜಿಗೆ ಮೂಲಭೂತ ಸೌಕರ್ಯಕ್ಕಾಗಿ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ:

| ಕ್ರ.ಸಂ | ಮಂಜೂರಾದ ವರ್ಷ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | 2015-16 | ಹೆಚ್ಚುವರಿ ತರಗತಿ ಕೊಠಡಿ ಮತ್ತು ಪ್ರಯೋಗಾಲಯ ನಿರ್ಮಾಣ | 115.00 |
| 2. | 2015-16 ರೂಸಾ 1.0 ಯೋಜನೆಯಡಿ | ಹೆಚ್ಚುವರಿ ತರಗತಿ ಕೊಠಡಿ ನಿರ್ಮಾಣ | 70.00 |
| | | ಉನ್ನತೀಕರಣ/ನವೀಕರಣಕ್ಕಾಗಿ | 26.73 |
| 3. | 2021-22 | ವಿವಿಧ ಕಟ್ಟಡ ಮೂಲಸೌಕರ್ಯ | 250.00 |
| 4. | 2023-24 | ವಿವಿಧ ಕಟ್ಟಡ ಮೂಲಸೌಕರ್ಯ | 500.00 |

ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಮೇಲ್ಕಂಡಂತೆ ಸದರಿ ಕಾಲೇಜಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮವಹಿಸಲಾಗಿದೆ.

ಇದಲ್ಲದೆ, ಕಳೆದ ಮೂರು ವರ್ಷಗಳಿಂದ ಕೋಲಾರದ ಬಾಲಕ ಹಾಗೂ ಬಾಲಕಿಯರ ಕಾಲೇಜಿಗೆ ಬಿಡುಗಡೆ ಮಾಡಲಾದ ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚಗಳ ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ.

ಸಂಖ್ಯೆ: ಇಡಿ 76 ಹೆಚ್‌ಪಿಸಿ 2024)

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

**ಸರ್ಕಾರಿ ಬಾಲಕರ ಕಾಲೇಜು, ಕೋಲಾರ ಕಾಲೇಜಿನಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ/ಕೊರತೆ ಇರುವ ಉಪನ್ಯಾಸಕರ ವಿವರ**

| ಕ್ರಸಂ. | ವಿಷಯ | ಮಂಜೂರಾದ ಹುದ್ದೆ | ಕಾರ್ಯನಿರತ ಉಪನ್ಯಾಸಕರು | ಖಾಲಿ ಹುದ್ದೆ |
|---|---|---|---|---|
| 1 | ಬಯೋಟೆಕ್ನೋಲಜಿ | 1 | 1 | 0 |
| 2 | ಸಸ್ಯಶಾಸ್ತ್ರ | 2 | 0 | 2 |
| 3 | ರಸಾಯನಶಾಸ್ತ್ರ | 2 | 0 | 2 |
| 4 | ವಾಣಿಜ್ಯಶಾಸ್ತ್ರ | 8 | 8 | 0 |
| 5 | ಗಣಕವಿಜ್ಞಾನ | 1 | 0 | 1 |
| 6 | ಅರ್ಥಶಾಸ್ತ್ರ | 2 | 2 | 0 |
| 7 | ಇಂಗ್ಲೀಷ್ | 3 | 0 | 3 |
| 8 | ಇತಿಹಾಸ | 6 | 4 | 2 |
| 9 | ಪತ್ರಿಕೋದ್ಯಮ | 1 | 1 | 0 |
| 10 | ಕನ್ನಡ | 6 | 2 | 4 |
| 11 | ಗಣಿತಶಾಸ್ತ್ರ | 2 | 2 | 0 |
| 12 | ಭೌತಶಾಸ್ತ್ರ | 3 | 3 | 0 |
| 13 | ರಾಜ್ಯಶಾಸ್ತ್ರ | 6 | 6 | 0 |
| 14 | ಸಮಾಜಶಾಸ್ತ್ರ | 1 | 1 | 0 |
| 15 | ಪ್ರವಾಸೋದ್ಯಮ | 1 | 1 | 0 |
| 16 | ಉರ್ದು | 1 | 0 | 1 |
| 17 | ಪ್ರಾಣಿಶಾಸ್ತ್ರ | 2 | 2 | 0 |
| 18 | ಹಿಂದಿ | 0 | 0 | 0 |
| 19 | ಸಮಾಜಕಾರ್ಯ | 0 | 0 | 0 |
| 20 | ದೈಹಿಕಶಿಕ್ಷಣನಿರ್ದೇಶಕರು | 1 | 1 | 0 |
| 21 | ಗ್ರಂಥಪಾಲಕರು | 1 | 1 | 0 |
| | **Total** | **50** | **34** | **16** |

ಅದಗ್ಯೂ ವಿವಿಧ ವಿಷಯಗಳಿಗೆ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಕೋಲಾರ ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜು ಇಲ್ಲಿ 48 ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಂಡು ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ.

ಅನುಬಂಧ-2

**ಸರ್ಕಾರಿ ಬಾಲಕರ ಕಾಲೇಜು, ಕೋಲಾರ ಕಾಲೇಜಿಗೆ ಪೀಠೋಪಕರಣ, ಪಠ್ಯಪುಸ್ತಕ, ಕಛೇರಿ ಮತ್ತು ಇತರೆ ವೆಚ್ಚಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ.**

(ರೂ.ಗಳಲ್ಲಿ)

| ಕ್ರ. ಸಂ | ಕಾಲೇಜಿನ ಹೆಸರು | 2021-22 | 2022-23 | 2023-24 |
|---|---|---|---|---|
| | | ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ | ಕಛೇರಿವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ | ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ |
| 1 | ಸರ್ಕಾರಿ ಬಾಲಕರ ಕಾಲೇಜು, ಕೋಲಾರ. | 484650 | 364220 | 581000 |

**ಸರ್ಕಾರಿ ಬಾಲಕಿಯರ ಕಾಲೇಜು, ಕೋಲಾರ ಕಾಲೇಜಿಗೆ ಪೀಠೋಪಕರಣ, ಪಠ್ಯಪುಸ್ತಕ, ಕಛೇರಿ ಮತ್ತು ಇತರೆ ವೆಚ್ಚಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ.**

(ರೂ.ಗಳಲ್ಲಿ)

| ಕ್ರ. ಸಂ | ಕಾಲೇಜಿನ ಹೆಸರು | 2021-22 | 2022-23 | 2023-24 |
|---|---|---|---|---|
| | | ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ | ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ | ಕಛೇರಿ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಮತ್ತು ಇತರೆ ವೆಚ್ಚ |
| 1 | ಸರ್ಕಾರಿ ಬಾಲಕಿಯರ ಕಾಲೇಜು, ಕೋಲಾರ. | 612142 | 402040 | 1403800 |